ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

ಕೂಲಿ ಕೆಲಸಕ್ಕಾಗಿ ಹೋಗಿದ್ದ ಕರ್ನಾಟಕದ ಒಬ್ಬ ಯುವಕ ಮಹಾರಾಷ್ಟ್ರದಲ್ಲಿ ಸತ್ತಿರುವ ಬಗ್ಗೆ

† ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ಅಧ್ಯಕ್ಷರೆ, ಬಹಳ ಮಹತ್ವರವಾದ ಒಂದು ವಿಷಯವನ್ನು ತಮ್ಮ ಅನುಮತಿ ಕೋರಿ ಸದನದ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇವತ್ತಿನ ಪ್ರಜಾವಾಣಿ ಪತ್ರಿಕೆಯಲ್ಲಿ ಕರ್ನಾಟಕದಿಂದ ವಲಸೆ ಹೋದಂಥ ೧೬ ವರ್ಷದ ಒಬ್ಬ ಯುವಕ ಮಹಾರಾಷ್ಟ್ರ ಸರ್ಕಾರದ ಪೋಲಿಸರ ದೌರ್ಜನ್ಯಕ್ಕೆ ಒಳಗಾಗಿ ಸತ್ತಿದ್ದಾನೆಂದು ವರದಿಯಾಗಿದೆ. ಮಹಾರಾಷ್ಟ್ರ ವಿಧಾನಸಭೆಯಲ್ಲಿ ನಿನ್ನೆ ದಿವಸ ಇದರ ಬಗ್ಗೆ ಚರ್ಚೆಯಾಗಿದೆ. ಆದ್ದರಿಂದ ತಮ್ಮ ಅನುಮತಿಯನ್ನು ಕೋರಿ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದು ಸರ್ಕಾರದಿಂದ ತಕ್ಷಣ ಕ್ರಮವನ್ನು ಬಯಸುತ್ತೇನೆ. ಗುಲ್ಬರ್ಗಾ ಜಿಲ್ಲೆಯ ಅಫ್‌ಜಲ್‌ಪುರ ತಾಲ್ಲೂಕಿನ ನಾಮದೇವ ಭಾಗಡೆ ಎನ್ನುತಕ್ಕ ಒಬ್ಬ ಯುವಕ ೨ ತಿಂಗಳ ಹಿಂದೆ ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ತುಳಜಾಪುರಕ್ಕೆ ಕೂಲಿಗೋಸ್ಕರ ಹೋಗಿದ್ದ. ತವಂಗೆ ಗೊತ್ತಿರುವಂತೆ, ಬೀದರ್, ಗುಲ್ಬರ್ಗಾ, ಬಿಜಾಪುರ, ಬೆಳಗಾಂ, ಕಾರವಾರ ಜಿಲ್ಲೆಗಳಿಂದ ಬಹಳಷ್ಟು ಕನ್ನಡಿಗರು ಆಂಧ್ರ, ಮಹಾರಾಷ್ಟ್ರ ರಾಜ್ಯಗಳಿಗೆ ಕೂಲಿಗಾಗಿ ಹೋಗಿ ಬರುತ್ತಿದ್ದಾರೆ. ಈ ನಾಮದೇವ ಭಾಗಡೆ ಎನ್ನುವವನು ನೊಮ್ಯಾಡಿಕ್ ಟ್ರೈಬ್‌ನ ಒಬ್ಬ ಯುವಕ. ಇವನು ಬಹಳ ಹಿಂದುಳಿದ ವರ್ಗಕ್ಕೆ ಸೇರಿದವನು. ಇವನ ಊರು ಅಫ್‌ಜಲ್‌ಪುರ ತಾಲ್ಲೂಕಿನಲ್ಲಿ ಒಂದು ಸಣ್ಣ ಹಳ್ಳಿ. ಕಳೆದ ೨ ತಿಂಗಳ ಹಿಂದೆ ಇವನು ಸೊಲ್ಲಾಪುರಕ್ಕೆ ಹೋಗಿ ಅಲ್ಲಿ ಕಂಬಳಿ ನೇಯ್ಯುವುದನ್ನು ಮಾಡುತ್ತಿದ್ದ. ಅಲ್ಲಿ ಒಂದು ಕನ್ನಡಿಗರ ಕಾಲೋನಿ ಇದೆ. ಅಲ್ಲಿ ಈತ ಇದ್ದ ೨೧ನೇ ತಾರೀಖಿನ ರಾತ್ರಿ ಇವನು ಸಿನಿಮಾವನ್ನು ನೋಡಿಕೊಂಡು ವಾಪಸು ಬರುತ್ತಿದ್ದಾಗ ಯಾರೋ ಒಬ್ಬ ಇನ್‌ಕಂಟ್ಯಾಕ್ಸ್ ಆಫೀಸರನ ಸೂಟ್‌ಕೇಸು ಹೋಯಿತು ಎಂತಲೋ ಅಥವಾ ಪಿಕ್‌ಪಾಕೆಟ್ ಆಯಿತು ಎಂತಲೋ ಸೊಲ್ಲಾಪುರ ಪೋಲೀಸರು ಇವನನ್ನು ಅಲ್ಲಿಯ ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಚನ್ನಾಗಿ ಥಳಿಸಿದ್ದಾರೆ. ಆನಂತರ ಐಡೆಂಟಿಫಿಕೇಷನ್‌ಗೋಸ್ಕರ ಇವನನ್ನು ಇವನು ಇದ್ದ ಕಾಲೋನಿಗೆ ಕರೆದುಕೊಂಡು ಬಂದಿದ್ದಾರೆ. ಅಲ್ಲಿ ಇವನ ಅಕ್ಕ ಪಾರಂಬಾಯಿ ಎನ್ನುವವಳು ಇದ್ದಳು. ಆಕೆ ಗರ್ಭಿಣಿ ಹೆಣ್ಣುಮಗಳು. ಆಕೆಯನ್ನೂ ಕೂಡ ಈ ಪೋಲೀಸರು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಇಬ್ಬರಿಗೂ ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಮಾರನೇ ದಿವಸ ಈ ನಾಮದೇವ್ ಭಾಗಡೆ ಸತ್ತಿದ್ದಾನೆ. ಇಲ್ಲಿ ಮುಖ್ಯವಾಗಿ ನನ್ನ ಭಯ ಏನೆಂದರೆ, ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಮಹಾರಾಷ್ಟ್ರ, ಪೂನ, ಮುಂಬಯಿಗಳಿಗೆ ಕೂಲಿಗಾಗಿ ಹೋಗಿರತಕ್ಕ ಜನ ಇದ್ದಾರೆ. ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಈ ವಿಚಾರ ಪ್ರಸ್ತಾಪ ಆದಾಗ ಒಬ್ಬ ಸಬ್ ಇನ್‌ಸ್ಪೆಕ್ಟರ್ ಮತ್ತು ೬ ಜನ ಕಾನ್‌ಸ್ಟೇಬಲ್‌ಗಳನ್ನು ಸೆಕ್ಷನ್ ೩೦೨ರ ಪ್ರಕಾರ ಅರೆಸ್ಟ್‌ಮಾಡಿ ಸಿ.ಓ.ಡಿ. ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದಾರೆ. ಆದರೆ ಇದರಿಂದಲೇ ನಾವು ತೃಪ್ತಿಪಟ್ಟರೆ ಆಗುವುದಿಲ್ಲ. ಏಕೆಂದರೆ ಇದು ಬಹಳ

ಸೂಕ್ಷ್ಮವಾದ ವಿಚಾರ. ಆದರಲ್ಲೂ ವಿಶೇಷವಾಗಿ ಹೈದರಾಬಾದ್–ಕರ್ನಾಟಕ, ಮುಂಬಯಿ–ಕರ್ನಾಟಕ ಏರಿಯಾಗಳಿಂದ ಲಕ್ಷಾತರ ಜನ ನಮ್ಮ ಕನ್ನಡಿಗರು ಕೂಲಿಗಾಗಿ ಆ ರಾಜ್ಯಗಳಿಗೆ ಹೋಗಿದ್ದಾರೆ ಇವತ್ತು ನಾವು ಅವರ ರಕ್ಷಣೆಗೆ ಹೋಗಬೇಕಾದ್ದು ನಮ್ಮ ಸದನದ ಹಾಗೂ ನಮ್ಮ ಸರ್ಕಾರದ ಆದ್ಯ ಕರ್ತವ್ಯವೆಂದು ನಾನು ತಿಳಿದ್ದಿದೇನೆ. ಈ ಘಟನೆಯ ಬಗ್ಗೆ ಒಂದು ನ್ಯಾಯಾಂಗ ತನಿಖೆಯನ್ನು ಮಾಡಿಸುವಂತೆ ಮಹಾರಾಷ್ಟ್ರ ಸರ್ಕಾರದ ಮೇಲೆ ನಮ್ಮ ಸರ್ಕಾರ ಒತ್ತಾಯ ತರಬೇಕು. ಇದಕ್ಕೆ ಮಹಾರಾಷ್ಟ್ರ ಸರ್ಕಾರದ ಪುರಸ್ಕಾರ ಇದೆಯೆಂದು ನಾನು ಹೇಳುವುದಿಲ್ಲ. ಆದರೆ ಈಗ ನಡೆದಿರತಕ್ಕ ಘಟನೆಯ ಬಗ್ಗೆ ಮಹಾರಾಷ್ಟ್ರ ಪೋಲೀಸರು ನಡೆದುಕೊಂಡಿರತಕ್ಕ ರೀತಿ ಏನಿದೆ ಅದು ತೀರ ಖಂಡನೀಯವಾದುದು, ಹಾಗೂ ಅಮಾನುಷ ಕೃತ್ಯ. ಆದ್ದರಿಂದ ಆ ರಾಜ್ಯದಲ್ಲಿ ಕೆಲಸ ಮಾಡುತ್ತಿರತಕ್ಕ ನಮ್ಮ ಕನ್ನಡಿಗರ ರಕ್ಷಣೆಗೆ ಎಲ್ಲ ಕ್ರಮಗಳನ್ನೂ ಕೈಗೊಳ್ಳುವ ಬಗ್ಗೆ ಸರ್ಕಾರದ ಪರವಿಯಿಂದ ಒಂದು ಹೇಳಿಕೆಯನ್ನು ನಾನು ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ವಿಚಾರ ತಮ್ಮ ಗಮನಕ್ಕೆ ಬಂದಿಲ್ಲದಿದ್ದರೆ ಕೂಡಲೇ ಮಹಾರಾಷ್ಟ್ರ ಸರ್ಕಾರದಿಂದ ತಾವು ಈ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳಬೇಕು. ನಾನು ಒಬ್ಬ ಸಾಮಾನ್ಯ ಸದಸ್ಯನಾಗಿ ಇಷ್ಟು ಮಾಹಿತಿಯನ್ನು ತಿಳಿದುಕೊಳ್ಳಲಿಕ್ಕೆ ಪ್ರಯತ್ನ ಮಾಡಿದ್ದೇನೆ. ತಾವೇನಾದರೂ ಅಕಸ್ಮಾತ್ತಾಗಿ ತಿಳಿದುಕೊಂಡಿದ್ದರೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುವವರಿದ್ದೀರಿ. ಇದರ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕು. ಆ ಕಡೆ ಕುಳಿತಿರತಕ್ಕ ಎಲ್ಲಾ ಮಾನ್ಯ ಸದಸ್ಯರಿಗೂ ನನ್ನಷ್ಟೇ ಕಾಳಜಿ ಈ ವಿಚಾರದಲ್ಲಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಹೊರನಾಡ ಕನ್ನಡಿಗರ ರಕ್ಷಣೆಗೆ ಹೋಗಬೇಕಾದ್ದು ಈ ಸದನದ ಪ್ರತಿಯೊಬ್ಬ ಸದಸ್ಯರ ಕರ್ತವ್ಯವೆಂದು ಹೇಳಿ ಸರ್ಕಾರದ ವತಿಯಿಂದ ಇದರ ಬಗ್ಗೆ ಒಂದು ಹೇಳಿಕೆಯನ್ನಷ್ಟೆ ಮತ್ತು ತಕ್ಷಣ ಕೈಗೊಳ್ಳಬಹುದಾದ ಕ್ರಮ ಏನೆಂಬುದನ್ನೂ ತಿಳಿಸಬೇಕೆಂದು ನಾನು ಒತ್ತಾಯಮಾಡುತ್ತೇನೆ.

SRI SUBHAS JOSHI (Nippani).— Hon'ble Speaker, Sir, In this regard I want to add that not only one person was beaten and killed but around four people from Karnataka were detained in the police custody. Namdev's sister, when she went to rescua her brother, her blouse was torn and she was beaten severely. About this there was discussion in the Maharashtra Assembly. There was a probe and CID enquiry is already done and in all six constables and one police officer are booked Section 302. My fear is that every time many Maharashtra police, they come to Karnataka in search of the culprita who are not there and harass Kannadiga people in Belgaum district. For that also, Karnataka Government should inform the Maharashtra Government that it should not be done henceforth.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ಪರಿಸ್ಥಿತಿ. ಇದು ಇವತ್ತೇ ಆಲ್ಲ ಮೊದಲಿನಿಂದಲೂ ನಡೆಯುತ್ತಿದೆ. ಗಡಿ ಪ್ರದೇಶದಿಂದ ಮಹಾರಾಷ್ಟ್ರಕ್ಕೆ ಕೆಲಸಕ್ಕೆ ಹೋದಾಗ ಅನೇಕ ತೊಂದರೆಗಳು ಉಂಟಾಗಿವೆ. ಈಗ ಗಮನಕ್ಕೆ ಬಂದಿರುವುದು ಇದು. ಗಮನಕ್ಕೆ ಬಾರದಿರಂಥ ನೂರಾರು ಪ್ರಕರಣಗಳು ಇವೆ. ಇದು ಸಿ.ಓ.ಡಿ. ತನಿಖೆಯಿಂದ ಮುಕ್ತಾಯವಾಗುತ್ತದೆಂದು ಅಲ್ಲ ಇದರ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು. ಇವತ್ತಿನವರೆಗೆ ಯಾವುದೇ ಪರಿಹಾರ ಕೊಟ್ಟಿಲ್ಲ ಮತ್ತು ಆತನ ಹೆಣವನ್ನು ಎಲ್ಲಿಗೆ ಕಳುಹಿಸಿದ್ದಾರೆಂಬ ಪ್ರಶ್ನೆ ನಿಗೂಢವಾಗಿದೆ. ಇದು ಬಹಳ ಗಂಭೀರವಾದುದು, ಇದನ್ನು ಇಷ್ಟಕ್ಕೆ ನಿಲ್ಲಿಸತಕ್ಕದ್ದಲ್ಲ. ಇದರ ಬಗ್ಗೆ ನಮ್ಮ ಸರ್ಕಾರದವರು ಮಹಾರಾಷ್ಟ್ರ ಸರ್ಕಾರದ ಜೊತೆಗೆ ಪರಿಣಾಮಕಾರಿಯಾಗಿ ಮಾತುಕತೆ ನಡೆಸಿ ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡದಿದ್ದರೆ ತೊಂದರೆಯಾಗುತ್ತದೆ. ಗಡಿ ಪ್ರದೇಶದ ಕನ್ನಡಿಗರಿಗೆ ಮಹಾರಾಷ್ಟ್ರ ಸರ್ಕಾರದವರು ರಕ್ಷಣೆ ಕೊಡುತ್ತಿಲ್ಲ. ಗಡಿ ಕನ್ನಡಿಗರನ್ನು ಮಹಾರಾಷ್ಟ್ರ ಸರ್ಕಾರದವರು ತುಳಿಯುತ್ತಿದ್ದಾರೆ. ಅವರಿಗೆ ರಕ್ಷಣೆ ಇಲ್ಲ. ಈ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಿ ನ್ಯಾಯಾಂಗ ತನಿಖೆಗೆ ಒತ್ತಾಯಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಸದಸ್ಯರು ಈ ಒಂದು ಘಟನೆ ಬಗ್ಗೆ ಏನು ಕಳವಳ ವ್ಯಕ್ತಪಡಿಸಿದ್ದಾರೆ ಇದರ ಬಗ್ಗೆ ಪತ್ರಿಕೆಯಲ್ಲಿ ಬಂದ ವರದಿಯನ್ನು ನಾನೂ ಕೂಡ ನೋಡಿದ್ದೇನೆ. ಈಗಾಗಲೇ ನಮ್ಮ ಸರ್ಕಾರ ಮಹಾರಾಷ್ಟ್ರ ಸರ್ಕಾರದಿಂದ ಸರಿಯಾದ ವರದಿ ತರಿಸಬೇಕೆಂದು ಕಾರ್ಯಕ್ರಮ ತೆಗೆದುಕೊಂಡಿದೆ. ಸಾಧ್ಯವಾದರೆ ಸಂಜೆಯೊಳಗೆ ಆ ವರದಿ ಬಂದ ಕೂಡಲೇ ಈ ಸದನಕ್ಕೆ ಏನು ನಡೆದಿದೆ ಎಂದು ಹೇಳುತ್ತೇನೆ, ಒಂದು ವಿಚಾರವನ್ನು ಮಹಾರಾಷ್ಟ್ರ ಸರ್ಕಾರಕ್ಕೆ ವಿಶೇಷವಾಗಿ ವಿನಂತಿಸಿಕೊಳ್ಳುತ್ತೇನೆ. ಈ ರೀತಿ ಘಟನೆಗಳು ಆಗದ ರೀತಿಯಲ್ಲಿ ಹೊರನಾಡ ಕನ್ನಡಿಗರು ವ್ಯವಹಾರದ ಮೇಲೆ ಅಥವಾ ಉದ್ಯೋಗದ ಮೇಲೆ ಏನು ಬರುತ್ತಾರೆ. ಅವರಿಗೆ ನ್ಯಾಯವಾದ ರಕ್ಷಣೆಕೊಡತಕ್ಕ ದೃಷ್ಟಿಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮಹಾರಾಷ್ಟ್ರ ಸರ್ಕಾರಕ್ಕೆ ತಿಳಿಸುತ್ತೇನೆ. ಸಾಧ್ಯವಾದರೆ ಇವತ್ತು ಸಂಜೆಯೊಳಗೆ ವರದಿ ತರಿಸುತ್ತೇವೆ. ಈಗಾಗಲೇ ನಾವು ಈ ಬಗ್ಗೆ ಸಂದೇಶ ಕಳುಹಿಸಿದ್ದೇವೆ.